## ಹನುಮಂತೋಪಾಖ್ಯಾನ

ಕೆಲವು ಸುದ್ದಿ ವಾಹಿನಿಯಲ್ಲಿ ಟೀವಿ ಆನ್ ಮಾಡಿದರೂ ಝೀ ಕನ್ನಡದ ಹಿಂದಿನ 'ಸರಿಗಮಪ' ವಿಜೇತ ಕುರಿಗಾಹಿ ಹನುಮಂತನ ಗಾಯನ. ಶನಿವಾರ, ಭಾನುವಾರವಂತೂ ದಿನದ ಕನಿಷ್ಠ 10 ಗಂಟೆ ಅವನದ್ದೇ ಕಾರ್ಯಕ್ರಮ. ಅನುಶ್ರೀ ಬರ್ತ್‌ಡೇಗೆ ಹನುಮಂತನ ಗಿಫ್ಟ್, ಚಿಲ್ಲೂರ ಚೆಲುವ ಹನುಮಂತ ದೇವರು, ಜವಾರಿ ಗಾಯಕ ಹನುಮಂತನ ಹೆಸರಿನಲ್ಲಿ ಸಿನಿಮಾ, ವೇದಿಕೆ ಮೇಲೆ ಕಣ್ಣೀರಿಟ್ಟ ಹನುಮಂತ, ಚುನಾವಣಾ ಕಣದಲ್ಲಿ ಸಿಂಗರ್ ಹನುಮಂತ. ತಲಾ ಹತ್ತು ಹಲವು ಬಾರಿ ಪುನರಪಿ ಪ್ರಸಾರವಾಗುವ ಈ ಕಾರ್ಯಕ್ರಮಗಳ ಅಗತ್ಯ ಏನಿದೆ? ಈ ಎಲ್ಲಾ ಕಾರ್ಯಕ್ರಮಗಳೂ ಝೀ ಕನ್ನಡದಿಂದ ಕಡ ತಂದವು.

–ಕೆ. ಶ್ರೀನಿವಾಸರಾವ್ ಹರಪನಹಳ್ಳಿ

## ಮೂರು ಸೂತ್ರದ ಧಾರ

ಕಲರ್ಸ್ ಕನ್ನಡದ 'ಪ್ರಮೇಲೋಕ' ನಾಯಕಿ ಪ್ರೇರಣಾ ಮತ್ತು ನಾಯಕ ಸೂರ್ಯ ಇಬ್ಬರೂ ಒಂದು ಹಳ್ಳಿಗೆ ಓಡಿ ಹೋಗುತ್ತಾರೆ. ಅಲ್ಲಿ ಒಬ್ಬ ಅಜ್ಜಿಯ ಮನೆಯಲ್ಲಿ ಗಂಡ– ಹೆಂಡತಿ ಎಂದು ಹೇಳಿಕೊಳ್ಳುತ್ತಾರೆ. ಅಲ್ಲಿ 'ವರಲಕ್ಷ್ಮಿ ಸ್ಟೋರ್ಸ್' ಧಾರಾವಾಹಿ ತಂಡದ ಜೊತೆ ಕಾಣಿಸಿಕೊಳ್ಳುತ್ತಾರೆ. ಈಗ ಅಲ್ಲಿಂದ 'ಮುದ್ದುಲಕ್ಷ್ಮಿ'ಯಲ್ಲೂ ಪ್ರವೇಶ ಪಡೆದಿದ್ದಾರೆ. ಈಗ ಮತ್ತೊಬ್ಬ ನಾಯಕಿಯಾಗಿ 'ಮನಸ್ವಿನಿ' ಪ್ರವೇಶವಾಗಿದೆ. ಈ ಗೊಂದಲದಿಂದ ಯಾವಾಗ ಮುಕ್ತಿ?

–ಶರ್ಮಿಷ್ಠಾ ರಘು

## ಮೌಢ್ಯ ನಿಷೇಧ ಜಾರಿ ಟೀವಿಗೂ ವಿಸ್ತರಿಸಲಿ

ಈಚೆಗೆ ರಾಜ್ಯದಲ್ಲಿ ಮೌಢ್ಯ ನಿಷೇಧ ಕಾಯಿದೆಯನ್ನು ಜಾರಿಗೊಳಿಸಿದೆ. ವಾಸ್ತು ಸಲಹೆ, ಜ್ಯೋತಿಷ್ಯ ಮತ್ತು ಸಾಡೇಸಾತಿ ಸಂಹಾರ ಸಲಹೆಗಳು ಸಿಗುವುದು ಟೀವಿಗಳಿಂದಲೇ. ಸುದ್ದಿ ವಾಹಿನಿಗಳು ನೇರವಾಗಿ ಅದರ ವ್ಯಾಪಾರ ಮಾಡಿದರೆ, ಧಾರಾವಾಹಿಗಳು ಪರೋಕ್ಷವಾಗಿ ಕಥೆಯಲ್ಲಿ ಮೌಢ್ಯವನ್ನು ಪ್ರತಿಪಾದಿಸುತ್ತವೆ. ಸಮಾಜದಲ್ಲಿ ಗೊಡ್ಡು ಸಂಪ್ರದಾಯಗಳಿಂದ ಮುಗ್ಧರ ಶೋಷಣೆ ನಡೆಯುತ್ತದೆ. ಟೀವಿಗಳು ಮೌಢ್ಯದ ವಿರುದ್ಧ ಜಾಗೃತಿ ಮೂಡಿಸುವ ಬದಲು ಜನರನ್ನು ಮತ್ತಷ್ಟು ಮೌಢ್ಯದ ಕೂಪಕ್ಕೆ ತಳ್ಳುತ್ತಿವೆ. ಇದನ್ನು ನಿಯಂತ್ರಿಸುವ ಮಟ್ಟಿಗೆ ಕಾನೂನಿನ ವ್ಯಾಪ್ತಿಯನ್ನು ವಿಸ್ತರಿಸಿದರೆ ಉತ್ತಮ.

–ವೀಣಾ ಶಂಕರ್ ಬೆಂಗಳೂರು

ವಾರದ ಪತ್ರ

## ಚಂದನದಲ್ಲಿ ಹಳಸಲು

ಜನವರಿ 28ರ ಮಂಗಳವಾರ ಪ್ರಸಾರವಾದ 'ಥಟ್ ಅಂತ ಹೇಳಿ' ಕಾರ್ಯಕ್ರಮ ಮರುದಿನ ಅಂದರೆ 29ನೇ ಬುಧವಾರದಂದು ಅದೇ ಪ್ರಸಾರವಾಗಿದೆ. ಮರುದಿನ ನಿಗದಿತ ಸಮಯದಲ್ಲಿ ಮತ್ತೊಂದು ಬೇರೆ ಕಂತು ಪ್ರಸಾರ ಆಗಬೇಕಿತ್ತು. ಹಿಂದಿನ ಕಂತೇ ಮರುದಿನ ಬಂದಿದೆ ಎಂದರೆ ಆದ ಲೋಪಕ್ಕೆ ಯಾರು ಹೊಣೆಗಾರರು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸ್ವಲ್ಪ ಎಚ್ಚರ ವಹಿಸಿದ್ದರೆ ಈ ಪ್ರಮಾದ ತಪ್ಪಿಸಬಹುದಾಗಿತ್ತು. ಕಾರ್ಯಕ್ರಮ ಶುರುವಾದ ಮೇಲಾದರೂ ಬದಲಾಯಿಸಬಹುದಾಗಿತ್ತು. ಆದರೆ ಅದನ್ನು ಬದಲಿಸಿಲ್ಲ ಎಂದರೆ ಅವರೇ ಈ ಕಾರ್ಯಕ್ರಮವನ್ನು ನೋಡುತ್ತಿಲ್ಲ ಎಂದು ಮೇಲು ನೋಟಕ್ಕೆ ಗೋಚರಿಸುತ್ತದೆ. ಅವರು ನೋಡುತ್ತಾರೋ ಬಿಡುತ್ತಾರೋ ಇಂತಹ ಪುನರಾವರ್ತನೆಯನ್ನು ನಿಲ್ಲಿಸಿ ವೀಕ್ಷಕರ ಸಮಯವನ್ನು ಉಳಿಸಬೇಕೆನ್ನುವುದು ನಮ್ಮ ವಿನಂತಿ.

–ವಸಂತಿ ಪಾರಂಪಳ್ಳಿ

## ಗಾಯನದಲ್ಲೂ ಚಂದನ

ನಮ್ಮ ನೆಚ್ಚಿನ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಗಾನ ಚಂದನ' ಬಹಳ ಚೆನ್ನಾಗಿ ಬರುತ್ತಿದೆ. ಪ್ರತಿ ಜಿಲ್ಲೆಯ ಗಾಯಕ ಗಾಯಕಿಯರಿಗೂ ವೇದಿಕೆ ಕೊಟ್ಟಿರುವುದು ನಿಜವಾಗಿಯೂ ಪ್ರಶಂಸನೀಯ. ಎಷ್ಟೋ ಗಾಯಕರು ಸಂಗೀತದ ತಾಲೀಮು ಇಲ್ಲದೆ ಕಂಠ ಚೆನ್ನಾಗಿದ್ದು ಕೇಳಿಯೇ ಹಾಡುವವರೂ ಇದ್ದಾರೆ. ಅವರೆಲ್ಲರಿಗೂ ಛಾಯಾ ಹಾಗೂ ಮನೋಹರ್ ಅವರಂತೂ ಅದೆಷ್ಟು ನಯವಾಗಿ, ಮನಸ್ಸಿಗೆ ನೋವಾಗದ ಹಾಗೆ ಒಳ್ಳೆಯ ಸೂಚನೆಗಳನ್ನು ನೀಡುವುದಲ್ಲದೇ ಬಹಳ ಪ್ರೋತ್ಸಾಹಿಸುತ್ತಾರೆ. ಇದರ ಜೊತೆ ಸಂಗೀತವನ್ನು ಕಲಿಯಲು ಸೂಚನೆಯನ್ನು ಕೊಡುವುದಲ್ಲದೇ ಮುಂದೆ ಒಳ್ಳೆಯ ಗಾಯಕರಾಗುವುದರಲ್ಲಿ ಸಂಶಯವೇ ಇಲ್ಲ ಎಂದು ಅವರನ್ನು ಹುರಿದುಂಬಿಸುತ್ತಾರೆ.

–ಶ್ಯಾಮಲಾ ಸತ್ಯ ಬೆಂಗಳೂರು

## ಸ್ವಾಗತಾರ್ಹ ಸಲಹೆ

ಝೀ ಕನ್ನಡದ 'ಪಾರು' ಧಾರಾವಾಹಿಯಲ್ಲಿ ರಘು ಮತ್ತು ಅಖಿಲಾಂಡೇಶ್ವರಿ ಕಾರಿನಲ್ಲಿ ದೇವಸ್ಥಾನಕ್ಕೆ ಹೊರಟಿರುವಾಗ... ಆಕಸ್ಮಿಕವಾಗಿ ಕಾರಿಗೆ ಬೆಕ್ಕು ಅಡ್ಡಲಾಗಿ ಹೋದಾಗ 'ಏನೋ ಅಪಾಯ ಇದೆ. ಅಪಶಕುನ ಎಂದು ಆತಂಕಪಟ್ಟಾಗ.. ರಘು ಅದನ್ನು ಅಲ್ಲಗಳೆದು ಮೂಢನಂಬಿಕೆಗೆ ಮಹತ್ವ ಕೊಡಬಾರದು ಎಂದು ನೀಡಿದ ಸಲಹೆ ಸ್ವಾಗತಾರ್ಹ.

–ಅಮರಯ್ಯಪತ್ರಿಮಠ ಶೋರಾಪುರ

## ಜಾಗ್ರತೆ ಬೇಕು ಎಲ್ಲರಲ್ಲೂ

ಝೀ ಕನ್ನಡದ 'ಜೊತೆ ಜೊತೆಯಲಿ' ಕಮಲಮ್ಮನ ವಠಾರದ ಹೆಂಗಸರು ಮನೆಯ ಮುಂದೆ ಕಸಗುಡ್ಡೆ ಹಾಕುತ್ತಿದ್ದಾರೆ. ಅದರಿಂದ ತೊಂದರೆ ಎಂದು ಗೊತ್ತಿದ್ದೂ ಅದನ್ನೇ ಮುಂದುವರಿಸಿದ್ದಾರೆ. ವಠಾರದ ಹಿರಿಯ ಸದಸ್ಯೆ ಈ ಬಗ್ಗೆ ತಿಳಿವಳಿಕೆ ನೀಡಿದ್ದು ಕಥೆಯ ಉತ್ತಮ ಬೆಳವಣಿಗೆ. ಆ ಕೆಲಸಕ್ಕೆ ಸಂಬಂಧಪಟ್ಟ ಅಧಿಕಾರಿ ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ. ಇದು ನಿತ್ಯವೂ ನಮ್ಮ ಸುತ್ತಲು ನಡೆಯುವ ನೈಜ ಕಥೆ. ನೈರ್ಮಲ್ಯದ ಬಗ್ಗೆ ನಾಗರಿಕರೂ ಜಾಗ್ರತೆ ವಹಿಸಿದರೆ ಇಲಾಖೆ ಕೂಡ ತನ್ನ ಕರ್ತವ್ಯ ನಿರ್ವಹಿಸುತ್ತದೆ.

–ಶ್ರೀನಾಥ ಕೊನೇಟಿ, ಬೆಂಗಳೂರು

## ಅಸಹಜತೆಯ ಆಗರ

ಕನ್ನಡ ಕಲರ್ಸ್‌ನ 'ಇವಳೇ ಸುಜಾತಾ' ಸಾಮಾನ್ಯನೂ ಗುರುತಿಸಬಹುದಾದ ಅನೇಕಾನೇಕ ಅಸಹಜಗಳಿವೆ. ಉದಾಹರಿಸಬೇಕೆಂದರೆ, ಸುಜಾತಾ ಕೆಲಸ ಮಾಡುತ್ತಿದ್ದ ಕ್ಲಬ್ ಅತ್ಯಾಧುನಿಕವಾಗಿದೆ. ಭವ್ಯ ಕಟ್ಟಡದಲ್ಲಿ ವಿದ್ಯುತ್ ಹೋದಾಗ ಯುಪಿಎಸ್ ಕೂಡ ಇಲ್ಲದಿರುವುದು ಸೋಜಿಗ. ಸುಜಾತಾ ಮತ್ತು ಪಾರ್ಥ ಕ್ಲಬ್‌ನ ಬೀಗ ಹಾಕಿದ ಕೋಣೆಯಲ್ಲಿ ಇರುತ್ತಾರೆ. ಆಗ ವಿದ್ಯುತ್ ಕೈಕೊಡುತ್ತದೆ. ಆದರೂ ಅವರ ಮೊಗದಲ್ಲೂ ಆಂತಕ ಇರಲಿಲ್ಲ. ದುರ್ಗಾದೇವಿಯ ಮಗ ಪಾರ್ಥ ಜ್ವರದ ತಾಪದಿಂದ ಬಳಲುತ್ತಿದ್ದರೂ ಅವರದೇ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ (ಪ್ರಾರ್ಥನ ಮದುವೆಯಾಗುವ) ಶಾನ್ವಿಗೆ ವಿಷಯ ತಿಳಿಯದಿರುವುದು. ಹೀಗೆ ಹೇಳುತ್ತ ಹೋದರೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

–ಅರವಿಂದ ಜಿ. ಜೋಷಿ ಮೈಸೂರು

## ಸಮಾಜಕ್ಕೆ ತಪ್ಪು ಸಂದೇಶ?

ಕಲರ್ಸ್ ಕನ್ನಡದ 'ಗೀತಾ' ಅನೇಕ ಮಹನೀಯರ ಮಾತುಗಳಿಗೆ ಬೆಲೆ ಇಲ್ಲ. ಭ್ರೂಣಹತ್ಯೆ ಮಹಾಪಾಪ ಎನ್ನುವ ಈ ಆಧುನಿಕ ಜಗತ್ತಿನಲ್ಲಿ ಧಾರಾವಾಹಿಯ ಒಬ್ಬ ತಂದೆ ಪಾತ್ರಧಾರಿ ಹೆಣ್ಣು ಅಂದರೆ 'ನಷ್ಟ' ಎನ್ನುವ ಬಗ್ಗೆ ಬಹಳ ಕೀಳಾಗಿ ಮಾತನಾಡುತ್ತಾರೆ. ಒಬ್ಬ ರಾಜಕೀಯ ವ್ಯಕ್ತಿಯ ಮಗ ಅವರಪ್ಪ ಕಟ್ಟಿಸಿದ ಕಾಲೇಜೆಂದು ಪರೀಕ್ಷೆಯಲ್ಲಿ ರಾಜಾರೋಷವಾಗಿ ಕಾಪಿ ಹೊಡೆಯುತ್ತಾನೆ. ಅಧ್ಯಾಪಕರನ್ನು ಅವಮಾನಮಾಡುತ್ತಾನೆ. ಸಹಪಾಠಿಗಳ ಶಾಂತಾಚಿತ್ತವನ್ನು ಹಾಳು ಮಾಡುತ್ತಾ ಕಾಲೇಜಿನ ಆವರಣದಲ್ಲಿ ಗುಂಡು ಹಾಕುವುದು ಸಿಗರೇಟ್ ಸೇದುವುದು ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿರುತ್ತಾನೆ. ಇದೆಲ್ಲ ಏನನ್ನು ಹೇಳುತ್ತದೆ?

–ಎನ್.ಎಸ್. ಚಂದ್ರಶೇಖರ್ ಬೆಂಗಳೂರು